**ದಿನಾಂಕಃ 05.07.2023 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ವೈ ವಕೀಲರಿಂದಃ–**

ನಾನು ಈ ಪ್ರಕರಣದಲ್ಲಿ ವಾದಿಯಾಗಿರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಈ ದಿನ ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕೆಂದು ನಿವೇದಿಸಿಕೊಳ್ಳುತ್ತೇನೆ. ಈ ಕೆಳಗಿನಂತೆ ದಾಖಲೆಗಳನ್ನು ನಿಶಾನೆಗೊಳಿಸಲಾಯಿತು.

| ಕ್ರ.ಸಂಖ್ಯೆ | ದಾಖಲೆಗಳ ವಿವರ | ನಿಶಾನೆಗಳು |
|---|---|---|
| 1. | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಿಂದ ನೀಡಲಾದ ಮಾಹಿತಿ ಪತ್ರ | ನಿ.ಪಿ–1 |
| 2. | ಹೇಮದಳ ಗ್ರಾಮದ 2 ಪುಟಗಳ ನಕಾಶೆ | ನಿ.ಪಿ–2 |
| 3. | ತಹಶೀಲ್ದಾರ್ ಕಛೇರಿಗೆ ಬರೆದ ಪತ್ರ | ನಿ.ಪಿ–3 |
| 4. | 2021–22 ನೇ ಸಾಲಿನ ಸ.ನಂ,215/1 ರ ಪಹಣಿ ಪತ್ರಿಕೆ | ನಿ.ಪಿ–4 |
| 5. | 2011–12 ನೇ ಸಾಲಿನ ಹೆಚ್ 138 ಮುಟ್ಯೇಷನ್ ರಿಜಿಸ್ಟರ್ | ನಿ.ಪಿ–5 |
| 6. | 2019–20 ನೇ ಸಾಲಿನ ಸ.ನಂ,213/1 ಪಿ2 ರ ಪಹಣಿ ಪತ್ರಿಕೆ | ನಿ.ಪಿ–6 |
| 7. | 2021–2022 ನೇ ಸಾಲಿನ ಸ.ನಂ,212/2 ರ 2 ಪುಟಗಳ ಪಹಣಿ ಪತ್ರಿಕೆ | ನಿ.ಪಿ–7 |
| 8. | 2 ಛಾಯಾಚಿತ್ರ ಗಳು | ನಿ .ಪಿ–8 |
| 9. | ಒಂದು ಸಿ.ಡಿ. | ನಿ.ಪಿ–8 ಎ |

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.